O.S. ನಂಬರಃ 23/2023
ಪಿ. ಡಬ್ಲ್ಯೂಃ 4

ದಿಃ17-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣ ಪತ್ರದಲ್ಲಿರುವ ಎಲ್ಲ ಅಂಶಗಳು ಸರಿಯಾಗಿದ್ದು, ನನಗೆ ಅದರ ಮಾಹಿತಿ ಇದ್ದು ತಿಳಿದು, ಸಹಿಯನ್ನು ಹಾಕಿರುತ್ತೇನೆ.

ಪಾಟಿ ಸವಾಲುಃ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

ನ್ಯಾಯಾಲಯದ ಮುಂದೆ ಇರುವ ವಾದಿಯ ಪರಿಚಯವಾಗಿ ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಸುಮಾರು 20-22 ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ವಾದಿಯ ಸಹೋದರಿಯು ನಿಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದು ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು 23 ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ನಿಮಗೆ ಯಾವ ವರ್ಷದಲ್ಲಿ ವಿದ್ಯುತ್ ಜೋಡಣೆ ಕೆಲಸ ಪ್ರಾರಂಭ ಮಾಡಿರುತ್ತೀರಿ ಎಂದರೆ ಸಾಕ್ಷಿಯು 2006ನೇ ಸಾಲಿನಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 2006 ನೇ ಸಾಲಿನಲ್ಲಿ ಯಾರ ಯಾರ ಮನೆಗೆ ವಿದ್ಯುತ್ ಜೋಡಣೆ ಕೆಲಸವನ್ನು ಮಾಡಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಸುರೇಶ ನಾಯ್ಕ, ಅವರ್ಸಾ,

ರಮೇಶ ಕುರ್ಲೆ ಇವರ ಮನೆಗೆ ಕೆಲಸ ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸುಮಾರು 20 ವರ್ಷಗಳ ಹಿಂದೆ ಯಾರ ಯಾರ ಮನೆಗಳಿಗೆ ವಿದ್ಯುತ್ ಜೋಡಣೆ ಕೆಲಸ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಎಸ್ ಎಂ. ಶೆಟ್ಟಿ, ಎಂ.ವಿ ಶೆಟ್ಟಿ, ಜಿ.ಹೆಚ್ ಬಡಗೇರಿ ಇವರ ಮನೆಗಳಿಗೆ ವಿದ್ಯುತ್ ಕೆಲಸ ಮಾಡಿಕೊಟ್ಟಿರುತ್ತೇನೆ. ಯಾರ ಯಾರ ಮನೆಗಳಿಗೆ ವಿದ್ಯುತ್ ಕೆಲಸ ಮಾಡಿಕೊಟ್ಟಿರುತ್ತೀರಿ ಎಂದು ಬರೆದಿಟ್ಟುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ನೀವು ಅಂದಾಜಿನ ಮೇಲೆ 20 ವರ್ಷಗಳ ಹಿಂದೆ ವಾದಿಯ ಮನೆಗೆ ವಿದ್ಯುತ್ ಕೆಲಸವನ್ನು ಮಾಡಿರುತ್ತೀರೋ ಅಥವಾ ಅದನ್ನು ಏನಾದರೂ ಬರೆದು ಇಟ್ಟಿರುತ್ತೀರೋ ಎಂದರೆ ಸಾಕ್ಷಿಯು ಅಂದಾಜಿನ ಮೇಲೆ ಎಂದು ನುಡಿಯುತ್ತಾರೆ. ನೀವು ಹೋದ ಮನೆಗಳಿಗೆ ಸದರಿ ಮನೆಗಳು ಯಾರ ಮಾಲೀಕತ್ವಕ್ಕೆ ಸೇರಿದ್ದು ಎಂದು ಏನಾದರೂ ವಿಚಾರಣೆ ಮಾಡುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಂಗೀತಾ ಸುರೇಶ ನಾಯಕ ಇವರ ಮನೆಯ 4 ದಿಕ್ಕಿನಲ್ಲೂ ಯಾರ ಯಾರ ಮನೆಗಳು ಬರುತ್ತವೆ ಎಂದು ಹೇಳಲು ಬರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಸುರೇಶ ನಾಯಕ ಇವರು ಎಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿಯು ಅದೇ ಮನೆಯಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ಅವರ ತಂದೆಯ ಹೆಸರು ಏನಾಗಿತ್ತು ಎಂದರೆ ಸಾಕ್ಷಿಯು ಸದಾನಂದ ನಾಯಕ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಸಂಗೀತಾ ಸುರೇಶ ನಾಯಕ ಇವರ ಮನೆಗೆ ಯಾವುದೇ ಕಾಲದಲ್ಲಿಯೂ ವಿದ್ಯುತ್ ಜೋಡಣೆ ಕೆಲಸ ಮಾಡಿದ್ದೇ ಇರುವುದಿಲ್ಲ, ಅವರು ನಿಮ್ಮ ಮನೆಯಲ್ಲಿ 23 ವರ್ಷಗಳಿಂದ ಬಾಡಿಗೆಗೆ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸುರೇಶ

ಶಿವಾನಂದ ನಾಯಕ ಇವರ ತಮ್ಮನ ಹೆಸರು ಏನು ಎಂದರೆ ಗೊತ್ತಿರುವುದಿಲ್ಲ. ಸಂಗೀತಾ ಸುರೇಶ ನಾಯಕ ಇವರು ವಾಸ ಮಾಡುತ್ತಿರುವ ಮನೆಯು 2ನೇ ಪ್ರತಿವಾದಿಯ ಮಾಲೀಕತ್ವಕ್ಕೆ ಸೇರಿದ ಮನೆಯಾಗಿದ್ದು, ವಿದ್ಯುತ್ ಕೆಲಸವನ್ನು ಆತನೇ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಸಂಗೀತಾ ವಾಸ್ತವ್ಯ ಮಾಡುತ್ತಿರುವ ಮನೆಗೆ ಯಾವುದೇ ರೀತಿಯಲ್ಲಿ ವಿದ್ಯುತ್ ಕೆಲಸವನ್ನು ಮಾಡಿದ್ದಾಗಲಿ ಅಥವಾ ಅವರ್ಸಾಕ್ಕೆ ಹೋಗಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೂ ವಿದ್ಯುತ್ ಕಾಮಗಾರಿ ಮಾಡುವ ಪರವಾಣಿಗೆ ಸಹ ನಿಮಗೆ ಇರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.